ಓ.ಎಸ್. ನಂ. 75/2018
ಪಿ.ಡಬ್ಲ್ಯೂ- 1

(ಇಂದು ದಿಃ 14-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- D-1(a and b)** ಮತ್ತು **10** ರಿಂದ **12** ನೇ ಪ್ರತಿವಾದಿಗಳ ಪರ ಶ್ರೀ. **BSS** ವಕೀಲರಿಂದ **:-**

ನಾನು 2 ವರ್ಷದವಳಿದ್ದಾಗ ನನ್ನ ತಂದೆ ಭೀಮಣ್ಣ ತೀರಿಹೋಗಿದ್ದಾರೆ. ನನ್ನ ಅಜ್ಜಿ ದ್ಯಾವಮ್ಮ ನಾನು ಜನಿಸಿದ ನಂತರ ನನಗೆ ತಿಳುವಳಿಕೆ ಬರುವ ಮುಂಚೆ ತೀರಿಹೋಗಿದ್ದಾರೆ. ಧ್ಯವಮ್ಮನ ತಂದೆ ಹೆಸರು ದೊಡ್ಡಪ್ಪ ಎಂದರೆ ಸರಿ. ದೊಡ್ಡಪ್ಪನಿಗೆ ದ್ಯಾವಮ್ಮ ಒಬ್ಬಳೇ ಮಗಳು ಎಂದರೆ ಸರಿ. ದೊಡ್ಡಪ್ಪನಿಗೆ ಬೇರೆ ಗಂಡು ಅಥವಾ ಹೆಣ್ಣು ಮಕ್ಕಳು ಯಾರು ಇರಲಿಲ್ಲ. ದಾವಾ ಜಮೀನುಗಳು ದೊಡ್ಡಪ್ಪ ತೀರಿಹೋದ ನಂತರ ದ್ಯಾವಮ್ಮನ ಹೆಸರಿಗೆ ಬಂದವು ಎಂದರೆ ಸರಿ. ದ್ಯಾವಮ್ಮನಿಗೆ ಅವರ ತಂದೆ ದೊಡ್ಡಪ್ಪನಿಂದ ದಾವಾ ಸ್ವತ್ತುಗಳು ಬಂದಿವೆ ಎಂದರೆ ಸರಿ. ಕಾರಣ ದಾವಾ ಸ್ವತ್ತಗಳು ದ್ಯಾವಮ್ಮನಸ್ತ್ರಿಧನ ಸ್ವತ್ತುಗಳು ಎಂದರೆ ಅದು ನ್ಯಾಯಾಲಯಕ್ಕೆ ಗೊತ್ತು ಎಂದು ಹೇಳುತ್ತಾರೆ.

6 ನೇ ಪ್ರತಿವಾದಿ ಸರ್ವೆನಂ. 727 ರಲ್ಲಿನ ಜಮೀನು ಖರೀದಿ ಮಾಡಿದ್ದಾರೆ ಕಾರಣ ಅವರನ್ನು ಪಾರ್ಟಿ ಮಾಡಿದ್ದೇನೆ. ಸದರಿ ಸ್ವತ್ತುನ್ನು 6 ನೇ ಪ್ರತಿವಾದಿಗೆ ಯಾರು ಖರಿದಿ ಕೊಟ್ಟರು ಗೊತ್ತಿಲ್ಲ. ಸದರಿ ಸ್ವತ್ತನ್ನು ದೇವಿಂದ್ರಪ್ಪ ತಂದೆ ಸಾಬಣ್ಣ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತಿಲ್ಲ ನಾವು ಈ ದಾವೆಯಲ್ಲಿ ಸದರಿ ದೇವಿಂದ್ರ ತಂದೆ ಸಾಬಣ್ಣ ರವರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ.4 ಮತ್ತು 5 ನೇ ಪ್ರತಿವಾದಿಯರಿಗೆ ದಾವಾ ಜಮೀನನ್ನು ಯಾರು ಮಾರಾಟ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಅವರಿಗೆ ಬೀರಪ್ಪ ತಂದೆ ದೇವಿಂದ್ರಪ್ಪ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತಿಲ್ಲ. ಸದರಿ ಬೀರಪ್ಪ ತಂದೆ ದೇವಿಂದ್ರಪ್ಪ ರವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. 4 ಮತ್ತು 5 ನೇಪ್ರತಿವಾದಿಯರಿಗೆ ಜಮೀನು ಮಾರಾಟ ಮಾಡಿದ ಬೀರಪ್ಪ ತಂದೆ ದೇವಿಂದ್ರಪ್ಪ ಮತ್ತು 8 ನೇ ಪ್ರತಿವಾದಿ ಬೀರಪ್ಪ ತಂದೆ ದೇವಿಂದ್ರಪ್ಪ ಬೇರೆ ಬೇರೆ ಎಂದರೆ ಸರಿ.

ನನ್ನ ಅಜ್ಜಿ ದ್ಯಾವಮ್ಮ ಮತ್ತು ನನ್ನ ತಂದೆ ಇಬ್ಬರು ಸೇರಿಕೊಂಡು ಸರ್ವೆ ನಂ. 727 ರಲ್ಲಿನ ಜಮೀನನ್ನು ಸಾಬಣ್ಣ ತಂದೆ ಬಸಪ್ಪ ಪೂಜಾರಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಸಾಬಣ್ಣ ಸದರಿ ಜಮೀನನ್ನು ಮಕ್ಕಳು ಮೊಮ್ಮಕಳ ನಡುವೆ ಭಾಗ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನಮ್ಮ ಕುಟುಂಬದಪಿತ್ರಾರ್ಜಿತ ಸ್ವತ್ತುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದ್ಯಾವಮ್ಮ ಬದುಕಿದ್ದಾಗ ದಾವಾ ಐಟಂ ನಂ. 1 ನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನು ಒಟ್ಟು 30 ಎ ಕರೆ ಪೈಕಿ 15 ಎಕರೆಯನ್ನು

ಈಗಾಗಲೆ ಮಾರಾಟ ಮಾಡಿದ್ದಾರೆ, 15 ಎಕರೆ ಉಳಿದುಕೊಂಡಿದೆ. ಉಳಿದ ಜಮೀನಿನಲ್ಲಿ 1 ನೆ ಪ್ರತಿವಾದಿ ಹೆಂಡತಿ ಮಕ್ಕಳು ಸ್ವಾಧಿನದಲ್ಲಿದ್ದಾರೆ ಎಂದರೆ ಸರಿ. ಕಳೆದ 30-40 ವರ್ಷಗಳಿಂದ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಸದರಿ ಜಮೀನಿನ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ಜಮೀನುಗಳ ಮುಟೇಷನನ್ನು ಸುಮಾರು 15 ವರ್ಷಗಳ ಹಿಂದೆ ಮಾಡಿಕೊಂಡಿದ್ದಾರೆ ಸದರಿ ಸಂಗತಿ ನನಗೆ ಇಂದಿನಿಂದ 10 ವರ್ಷಗಳ ಹಿಂದೆ ಗೊತ್ತಾಗಿದೆ.

ದಾವಾ ಸ್ವತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಅವುಗಳಲ್ಲಿ ಪ್ರತಿವಾದಿಯರು ನನಗೆ ಭಾಗ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ದ್ಯಾವಮ್ಮನ ಗಂಡ ಆಶಪ್ಪ ಎಂದರೆ ಸರಿ. ಯಾವತ್ತು ದಾವಾ ಸ್ವತ್ತಗಳು ಆಶಪ್ಪನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತಗಳು ಮುಂಚೆ ದ್ಯಾವಮ್ಮನ ತಂದೆ ದೊಡ್ಡಪ್ಪನ ಹೆಸರಿನಲ್ಲಿದ್ದವು ಅವರ ಮರಣ ನಂತರ ದ್ಯಾವಮ್ಮನ ಹೆಸರಿಗೆ ಆಗಿವೆ ಎಂದರೆ ಸರಿ. ದಾವಾ ಸ್ವತ್ತಗಳು ದ್ಯಾವಮ್ಮನ ಗಂಡ ಆಶಪ್ಪನಿಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ದ್ಯಾವಮ್ಮನಿಗೆ ದಾವಾ ಸ್ವತ್ತಗಳು ಅವಳ ತಂದೆ ತಾಯಿ ಮನೆ ಕಡೆಯಿಂದ ಬಂದಿರುವುದರಿಂದ ಅವುಗಳಲ್ಲಿ ನನಗೆ ಯಾವುದೇ ಹಕ್ಕು ಅಥವಾ ಭಾಗ ಇಲ್ಲ ಎಂದರೆ ಸರಿಯಲ್ಲ. ದ್ಯಾವಮ್ಮ ಬದುಕಿದ್ದಾಗ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದವು ಮತ್ತು ಅವಳ ಮರಣ ನಂತರ ಉಳಿದ ಸ್ವತ್ತಗಳು ಮೃತ ನಾಗಪ್ಪನ ಹೆಸರಿಗೆ ಆಗಿದ್ದು ಕಾರಣ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.

ದ್ಯಾವಮ್ಮ ದಾವಾ ಜಮೀನನ್ನು ಮಾರಾಟ ಮಾಡಿ ಸುಮಾರು 30-40 ವರ್ಷ ಆಗಿದೆ ಎಂದರೆ ಸರಿ. ಖರೀದಿ ಪತ್ರ ಆದಾಗಿನಿಂದ ಖರೀದಿದಾರರು ಸದರಿ ಸ್ವತ್ತುಗಳ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.